## ಮನವಿ :

ಮನುಷ್ಯನ ಪ್ರಾಥಮಿಕ ಅವಶ್ಯಕತೆಗಳಾದ ಆಹಾರ, ಔಷಧಿ, ವಿದ್ಯೆಗಳನ್ನು ಉಚಿತವಾಗಿ ನೀಡುವ ಸಂಸ್ಕೃತಿ ನಮ್ಮದು. ಇವುಗಳನ್ನು ನೀಡುತ್ತಿದ್ದ ಮಠ, ಮಂದಿರ, ಗುರುಕುಲಗಳಿಗೆ ಸಮಾಜದ ಜನರೇ ಧನ - ಧಾನ್ಯಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದರು.

ವ್ಯಕ್ತಿತ್ವ ವಿಕಾಸದ ಜೊತೆಗೆ ರಾಷ್ಟ್ರೀಯ ಪ್ರಜ್ಞೆ ಮೂಡಿಸುವ ಮೂಲಕ ಸ್ವಸ್ಥ ಸಮಾಜದ ನಿರ್ಮಾಣಕ್ಕಾಗಿ ಪ್ರಬೋಧಿನೀ ಗುರುಕುಲ ಪ್ರಯತ್ನಿಸುತ್ತಿದೆ. ಸಮಾಜಕ್ಕಾಗಿ ಇರುವ ಗುರುಕುಲದ ಪೋಷಣೆ ಸಮಾಜದ್ದೇ ಕರ್ತವ್ಯವಾಗಿದೆ, ಅಲ್ಲವೇ ? ಹೀಗಾಗಿ ನಿಮ್ಮದೇ ಆದ ಗುರುಕುಲಕ್ಕೆ ಕರ್ತವ್ಯ ಭಾವನೆಯಿಂದ ಧನ - ಧಾನ್ಯಗಳನ್ನು ಉದಾರ ಹೃದಯದಿಂದ ನೀಡುವ ಮೂಲಕ ಇದರ ಸರ್ವಾಂಗೀಣ ಬೆಳವಣಿಗೆಗಾಗಿ ಸಹಕರಿಸಬೇಕಾಗಿ ವಿನಂತಿಸುವೆವು.

**ತಾವು ಹೀಗೆ ಧನ ತೊಡಗಿಸಿ ಸಹಕರಿಸಬಹುದು :**

| | | |
|---|---|---|
| 1 | ಒಂದು ಹೊತ್ತಿನ ಅನ್ನದಾನ | **5,000-00** |
| 1 | ಒಂದು ತಿಂಗಳ ಒಂದು ಹಸುವಿನ "ಗೋ ಸೇವಾ ನಿಧಿ" | **10,000-00** |
| 1 | ಒಂದು ದಿನದ ಅನ್ನದಾನ | **15,000-00** |
| 1 | ಒಂದು ದಿನದ ಅನ್ನದಾನ ಮತ್ತು ವಿದ್ಯಾದಾನ | **25,000-00** |
| 1 | ಒಬ್ಬ ವಿದ್ಯಾರ್ಥಿಯ ಒಂದು ವರ್ಷದ ಪ್ರಾಯೋಜಕತ್ವ | **50,000-00** |
| 1 | ಒಬ್ಬ ವಿದ್ಯಾರ್ಥಿಯ ಶಾಶ್ವತ ಪ್ರಾಯೋಜಕತ್ವ (12 ವರ್ಷ) | **5,00,000-00** |

ಸಹಕರಿಸಿ, ಸಹಕರಿಸುವಂತೆ ಪ್ರಯತ್ನಿಸಿ,

ದಯಮಾಡಿ ಕ್ರಾಸ್ಡ್ ಚೆಕ್, ಡಿ.ಡಿ. ಗಳನ್ನು **"ಪ್ರಬೋಧಿನೀ ಟ್ರಸ್ಟ್"** ಹೆಸರಿಗೆ ನೀಡಬೇಕಾಗಿ ವಿನಂತಿ.

**ದೇಣಿಗೆಗಳಿಗೆ ನಿಯಮ 80-G ಯಂತೆ ಆದಾಯ ತೆರಿಗೆ ವಿನಾಯಿತಿ ಇರುತ್ತದೆ**

ದಾನಿಗಳು ಬ್ಯಾಂಕ್‌ಗೆ ಹಣ ಹಾಕಿದ ನಂತರ ದಯವಿಟ್ಟು ನಮ್ಮ ಇ-ಮೇಲ್/ ವಾಟ್ಸಪ್ ನಂಬರ್‌ಗೆ ಪಾನ್ ನಂಬರ್ ವಿಳಾಸ ಹಾಗೂ ದೂರವಾಣಿಯ ವಿವರಗಳನ್ನು ಕಳುಹಿಸಬೇಕಾಗಿ ವಿನಂತಿ.

**Our Account Detail :**

**KARNATAKA BANK**
Ac. Name : Prabodhini Trust
Ac. No. : 3222500100272101
Branch : Hariharapura
I.F.S.C.: KARB0000322

**CANARA BANK**
Ac. Name : Prabodhini Trust
Ac. No. : 09052200018870
Branch: Hariharapura
I.F.S.C. :CNRB0010905



ನಿಮ್ಮ ಗುರುಕುಲಕ್ಕೊಮ್ಮೆ ಆಗಮಿಸಿ.


## ಪ್ರಬೋಧಿನೀ ಟ್ರಸ್ಟ್ ಸದಸ್ಯರು

**ಶ್ರೀ ಹೆಚ್. ಬಿ. ರಾಜಗೋಪಾಲ್,**
ಕೆರೆಹಕ್ಲು ಎಸ್ಟೇಟ್, ಬಾಳೆಹೊನ್ನೂರು — ನಿರ್ವಾಹಕ ವಿಶ್ವಸ್ತ

**ಶ್ರೀ ಬಿ. ಕೆ. ಗಣೇಶ್ ರಾವ್,** ಕೃಷಿಕರು, ಕೊಪ್ಪ — ವಿಶ್ವಸ್ತ

**ಶ್ರೀ ಸುಮಂತ್ ಶೆಟ್ಟಿ,** ಆರ್ಕಿಟೆಕ್ಚರಲ್ ಇಂಜಿನಿಯರ್, ಬೆಂಗಳೂರು — ವಿಶ್ವಸ್ತ

ಶ್ರೀ ಎ. ಎಸ್. ಭೀಮಣ್ಣ, ಉದ್ಯಮಿ, ಬೆಂಗಳೂರು — ವಿಶ್ವಸ್ತ

**ಶ್ರೀ ವಿಜಯ್ ಕುಮಾರ್,** ಉದ್ಯಮಿ, ಪಿರಿಯಾಪಟ್ಟಣ — ವಿಶ್ವಸ್ತ

ಶ್ರೀ ಅರವಿಂದ, ಗುರುಕುಲದ ಹಿರಿಯ ವಿದ್ಯಾರ್ಥಿ,
ಕೃಷಿಕರು, ಬಂಟ್ವಾಳ — ವಿಶ್ವಸ್ತ

ಶ್ರೀ ವಿಶ್ವಜಿತ್, ವಕೀಲರು, ಉಚ್ಚ ನ್ಯಾಯಲಯ, ಬೆಂಗಳೂರು — ವಿಶ್ವಸ್ತ

**ಶ್ರೀ ಕೆ. ಉಮೇಶ್ ರಾವ್,** ಹರಿಹರಪುರ — ಕಾರ್ಯದರ್ಶಿ

ಶ್ರೀ ಕೃಷ್ಣ ಶಾಸ್ತ್ರೀ, ಹರಿಹರಪುರ — ಸಂಚಾಲಕ

## ಗುರುಕುಲ ಶಿಕ್ಷಣ ಮಾರ್ಗದರ್ಶಕ ಮಂಡಳಿ

**ಪ್ರೊ। ರಾಮಚಂದ್ರ ಭಟ್ಟ,** ಕೋಟೆಮನೆ - ಸಂಯೋಜಕರು, ಕರ್ನಾಟಕ ಗುರುಕುಲ ಶಿಕ್ಷಣ
ವಿಶ್ರಾಂತ ಕುಲಪತಿಗಳು, S-Vyasa ಯೋಗ ವಿಶ್ವವಿದ್ಯಾನಿಲಯ, ಬೆಂಗಳೂರು

**ವಿದ್ವಾನ್ ಟಿ. ಎನ್. ಪ್ರಭಾಕರ,** ನಿವೃತ್ತ ಜಂಟಿ ನಿರ್ದೇಶಕರು,
ಉನ್ನತ ಶಿಕ್ಷಣ ವಿಭಾಗ, ಕರ್ನಾಟಕ

**ಶ್ರೀ ವಿ. ನಾಗರಾಜ್,** ಮಿಥಿಕ್ ಸೊಸೈಟಿ, ಬೆಂಗಳೂರು

**ಡಾ। ಗಣೇಶ ಈಶ್ವರ ಭಟ್ಟ,** ವೇದಾಂತ ಪ್ರಾಧ್ಯಾಪಕರು,
ಕೇಂದ್ರಿಯ ಸಂಸ್ಕೃತ ಕಾಲೇಜು, ಶೃಂಗೇರಿ

**ಪ್ರೊ। ವೀರನಾರಾಯಣ ಪಾಂಡುರಂಗಿ,**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು

**ಡಾ। ಮಂಜುನಾಥ ಶರ್ಮಾ,** ಉಪಕುಲಪತಿಗಳು,
S-Vyasa ಯೋಗ ವಿಶ್ವವಿದ್ಯಾನಿಲಯ, ಜಿಗಣಿ, ಬೆಂಗಳೂರು

**ಪ್ರೊ। ರಾಜರಾಮ್ ಶುಕ್ಲ,** ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ, ಕಾಶಿ

**ಪ್ರೊ। ಜಯರಾಮ್ ,** S-Vyasa ಯೋಗ ವಿಶ್ವವಿದ್ಯಾನಿಲಯ, ಜಿಗಣಿ, ಬೆಂಗಳೂರು


[illegible] ಮುದ್ರಣ, ಕಾರ್ಕಳ ✆ : 230715

ॐ

|| ಧಿಯೋ ಯೋ ನಃ ಪ್ರಚೋದಯಾತ್ ||

# ಪ್ರಬೋಧಿನೀ ಗುರುಕುಲಮ್



# ಮನವಿ


**ಪ್ರಬೋಧಿನೀ ಟ್ರಸ್ಟ್ (ರಿ)**
ಚಿತ್ರಕೂಟ, ಅದ್ದಡ ಗ್ರಾಮ, ಅಂಚೆ : ಹರಿಹರಪುರ – 577120
ಕೊಪ್ಪ ತಾಲೂಕು, ಚಿಕ್ಕಮಗಳೂರು ಜಿಲ್ಲೆ
Phone : 8073570250, 9448007005
email : prabodhinigurukula@gmail.com
www.prabodhinigurukula.org

# ಪ್ರಬೋಧಿನೀ ಟ್ರಸ್ಟ್ (ರಿ.)

1979ರಲ್ಲಿ ಪ್ರಾರಂಭಗೊಂಡ ಪ್ರಬೋಧಿನೀ ಟ್ರಸ್ಟ್ ರಾಜ್ಯಾದ್ಯಂತ ಸಾಮಾಜಿಕ, ಶೈಕ್ಷಣಿಕ ಹಾಗೂ ಸೇವಾಕ್ಷೇತ್ರದಲ್ಲಿ ಕಾರ್ಯ ಮಾಡುತ್ತಿದೆ.

ಪೂಜ್ಯ ಜಗದ್ಗುರು ಶಂಕರಾಚಾರ್ಯರ ತಪೋಭೂಮಿಯಾದ ಶೃಂಗೇರಿಯ ಸಮೀಪ ಹರಿಹರಪುರದ ತುಂಗಾ ನದಿಯ ತಟದಲ್ಲಿರುವ ಚಿತ್ರಕೂಟವು ಇದರ ಕೇಂದ್ರಸ್ಥಾನ.

# ಪ್ರಬೋಧಿನೀ ಗುರುಕುಲ

ಇಂದು ನಮ್ಮ ದೇಶದಲ್ಲಿ ಶಿಕ್ಷಣದ ಬಗ್ಗೆ ಚರ್ಚೆ ನಡೆಯುತ್ತಿದೆ. ಏಕೆಂದರೆ, ಇಂದು ಭಾರತದಲ್ಲಿ ಶಿಕ್ಷಣ ಇದೆ, ಆದರೆ ಶಿಕ್ಷಣದಲ್ಲಿ ಭಾರತೀಯತೆ ಇಲ್ಲ. ಭಾರತೀಯ ಶಿಕ್ಷಣ ಇಲ್ಲದೆ ಭಾರತೀಯರ ನಿರ್ಮಾಣ ಹೇಗೆ ಸಾಧ್ಯ? ಭಾರತೀಯರೇ ಇಲ್ಲದ ನಾಡು ಜಗತ್ತಿನಲ್ಲಿ ಹೇಗೆ ಭಾರತವಾಗಿ ತಲೆ ಎತ್ತಿ ನಿಲ್ಲಲು ಸಾಧ್ಯ? ಹಾಗಾಗಿ ಶಿಕ್ಷಣದಲ್ಲಿ ಭಾರತೀಯತೆಯನ್ನು ತರಲು "ಪ್ರಬೋಧಿನೀ ಗುರುಕುಲ"ದಲ್ಲಿ ಪ್ರಯತ್ನದ ಮೊದಲ ಹೆಜ್ಜೆಯನ್ನು ಇಡಲಾಗಿದೆ. ಆಧ್ಯಾತ್ಮಿಕ ತಳಹದಿಯ ಮೇಲೆ ಗುರುಕುಲ ಮಾದರಿಯ ಶಿಕ್ಷಣವನ್ನು 1995 ರಿಂದ ನೀಡಲಾಗುತ್ತಿದೆ.

**ತತ್ವ ಉದ್ದೇಶ :**

- ಸ್ವಸ್ಥ ಸಮಾಜದ ನಿರ್ಮಾಣ.
- ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಎಂಬ ಸಮಗ್ರ ವ್ಯಕ್ತಿತ್ವದ ವಿಕಾಸದ ಶಿಕ್ಷಣ.
- ಸ್ವಾಧ್ಯಾಯ, ಸ್ವಚಿಂತನೆ, ಸ್ವಾನುಶಾಸನ ಮತ್ತು ಸ್ವಾವಲಂಬನೆ ಗುರುಕುಲದ ಮುಖ್ಯ ಲಕ್ಷಣ.
- ಮೇಲ್ಪಂಕ್ತಿಯಿಂದ ಸದ್ವ್ಯವಹಾರ ಶಿಕ್ಷಣ.

**ಕಾರ್ಯ ಯೋಜನೆ :**

- ಪ್ರತಿ ವರ್ಷ ಹತ್ತು ವರ್ಷ ತುಂಬಿದ (11 ವರ್ಷದೊಳಗಿನ) 20-25 ಬಾಲಕರ ಸೇರ್ಪಡೆ.
- ಹನ್ನೆರಡು ವರ್ಷಗಳ ಆವಾಸೀ ಶಿಕ್ಷಣ.
- ಕನ್ನಡ, ಸಂಸ್ಕೃತ, ಇಂಗ್ಲಿಷ್, ಹಿಂದಿ ಭಾಷೆಗಳ ಕಲಿಕೆ.
- ವೇದ, ಯೋಗ, ಕೃಷಿ, ಭಾರತೀಯ ವಿಜ್ಞಾನ ಮತ್ತು ಕಲಾಕೌಶಲ ವಿಷಯಗಳ ಜೊತೆಗೆ ಗಣಿತ, ವಿಜ್ಞಾನ, ಇತಿಹಾಸ ಎಂಬ ವಿಷಯಗಳನ್ನೊಳಗೊಂಡ ಪಂಚಮುಖಿ ಶಿಕ್ಷಣದ ತರಬೇತಿ.
- **ಶಿಕ್ಷಣ, ಆಹಾರ, ವಸತಿ ಸಂಪೂರ್ಣ ಉಚಿತ.**





ಬೆಳಿಗ್ಗೆ 5-00 ರಿಂದ ರಾತ್ರಿ 9-30ರ ತನಕ ಕಲಿಕೆಯಲ್ಲಿ ವಿದ್ಯಾರ್ಥಿಗಳು ನಿರತರಾಗುವರು. ಮುಂಜಾನೆ ಪ್ರಾತಃಸ್ಮರಣೆ, ಯೋಗಾಸನ, ಸ್ವಚ್ಛತೆ, ಸ್ನಾನ, ಪೂಜೆ, ಉಪಾಹಾರದ ನಂತರ ವಿವಿಧ ಅವಧಿಗಳು ಇವೆ. ಸಂಜೆ ಆಟಗಳು, ರಾತ್ರಿ ಭಜನೆ, ಭಗವದ್ಗೀತಾ ಪಠನ, ಧ್ಯಾನ, ಸ್ವಾಧ್ಯಾಯದ ಮೂಲಕ ಸರ್ವಾಂಗೀಣ ಬೆಳವಣಿಗೆಗೆ ಗಮನ ನೀಡಲಾಗುತ್ತಿದೆ.

ಸುತ್ತಮುತ್ತಲ ಗ್ರಾಮಗಳಲ್ಲಿ ಸಂಸ್ಕಾರ ಕೇಂದ್ರ, ಶಾಲೆಗಳಲ್ಲಿ ಪಾಠ, ಸಂಸ್ಕೃತ -ಸಂಸ್ಕೃತಿ ಶಿಕ್ಷಣ, ಯೋಗತರಬೇತಿ ಮತ್ತು ಬಾಲಗೋಕುಲ, ತಿಂಗಳಿಗೊಮ್ಮೆ 350ಕ್ಕೂ ಹೆಚ್ಚು ಮನೆಗಳನ್ನು ಮುಷ್ಟಿ ಭಿಕ್ಷೆ ಯೋಜನೆಯಡಿ ಸಂಪರ್ಕಿಸಲಾಗುತ್ತಿದೆ.

**ಅಧಿಪ್ರಜ್ಞ ಶಿಕ್ಷಣ**

ಅಧಿಪ್ರಜ್ಞ ಶಿಕ್ಷಣ : 2018ನೇ ಶೈಕ್ಷಣಿಕ ವರ್ಷದಿಂದ ಸಂಸ್ಕೃತ, ಯೋಗ ಹಾಗೂ ಕೃಷಿ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಪ್ರಜ್ಞ (ಕಾಲೇಜು) ಸ್ತರದ ಶಿಕ್ಷಣವು ಆರಂಭಗೊಂಡಿದೆ.

**ವೇದಶಿಕ್ಷಾ ವರ್ಗ :**

ಕಳೆದ ನಾಲ್ಕು ದಶಕಗಳಿಂದ ಪ್ರತಿ ಏಪ್ರಿಲ್‌ನಲ್ಲಿ 7, 8 ಹಾಗೂ 9ನೇ ತರಗತಿ ಪೂರೈಸಿದ ಆಸಕ್ತ ಬಾಲಕರಿಗೆ ವೇದ, ಸಂಸ್ಕೃತ, ಯೋಗಾಸನ, ಪೂಜಾವಿಧಿ, ಭಜನೆ, ಭಗವದ್ಗೀತೆ, ಈಜು ಇತ್ಯಾದಿ ವಿಷಯಗಳನ್ನು 15 ದಿನಗಳ ಅವಧಿಯಲ್ಲಿ **ಉಚಿತವಾಗಿ** ಕಲಿಸಲಾಗುತ್ತಿದೆ.

**ಪೂರ್ವ ಛಾತ್ರ ಪರಿಷತ್ :** ಪ್ರಬೋಧಿನೀ ಗುರುಕುಲದಲ್ಲಿ ಅಧ್ಯಯನ ಪೂರೈಸಿರುವ ಹಿರಿಯ ವಿದ್ಯಾರ್ಥಿಗಳ ಸಂಘವೇ "**ಪೂರ್ವ ಛಾತ್ರ ಪರಿಷತ್**". ವರ್ಷಕ್ಕೊಮ್ಮೆ ಪೂರ್ವ ಛಾತ್ರ ಪರಿಷತ್ ಸಮಾವೇಶ ನಡೆಸಲಾಗುತ್ತಿದೆ.

**ಪ್ರಬೋಧಿನೀ ಸಂಸ್ಕೃತಿ ಸಂಸ್ಕಾರ ಕೇಂದ್ರ :**

ರಾಜ್ಯಾದ್ಯಂತ ಪುರುಷರಿಗೆ ಮತ್ತು ಮಹಿಳೆಯರಿಗೆ ಯೋಗಾಸನ ಮತ್ತು ಪ್ರಾಣಾಯಾಮದ ತರಗತಿಗಳನ್ನು ನಡೆಸಲಾಗುತ್ತಿದೆ. ಇವುಗಳ ಜೊತೆಗೆ ಮಕ್ಕಳಿಗೆ ಸಂಸ್ಕಾರವನ್ನು ನೀಡುವ ಶಿಶುಮಂದಿರಗಳು, ಬಾಲಗೋಕುಲಗಳು ಮತ್ತು ಮಾತೆಯರಿಗೆ ಮಾತೃಮಂಡಳಿಗಳ ಮೂಲಕ ಶಿಕ್ಷಣವನ್ನು ನೀಡಲಾಗುತ್ತಿದೆ.





**ಭೇಟಿ - ಮಾರ್ಗದರ್ಶನ :**

ಇಂದು ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ಆಗಬೇಕೆಂದು ನಾಡಿನ ಅನೇಕ ಗಣ್ಯರು, ಶಿಕ್ಷಣಾಸಕ್ತರು ಮತ್ತು ತಜ್ಞರು ಬಯಸುತ್ತಿದ್ದಾರೆ. ಅವರಲ್ಲಿ ಅನೇಕ ಗಣ್ಯರು ಗುರುಕುಲ ಸಂದರ್ಶಿಸಿ ಹರ್ಷಿಸಿದ್ದಾರೆ, ಸೂಕ್ತ ಸಲಹೆ ನೀಡಿ ಹರಸಿದ್ದಾರೆ.

ಪೂಜ್ಯ ಶ್ರೀ ಶ್ರೀಗಳಾದ, ಹರಿಹರಪುರ ಶ್ರೀಮಠ, ಶ್ರೀ ರಂಭಾಪುರೀ ಪೀಠ, ಶ್ರೀಪೀಠ ಶ್ರೀಶಕಟಪುರ, ಶ್ರೀ ಮಾದಾರಚನ್ನಯ್ಯ ಗುರುಪೀಠ, ಶ್ರೀ ಪೇಜಾವರ, ಶ್ರೀ ರಾಮಚಂದ್ರಾಪುರ, ಕನ್ನೇರಿ ಶ್ರೀ ಕಾಡಸಿದ್ದೇಶ್ವರ ಪೀಠ, ಸಿಂಹನಗದ್ದೆ ಜೈನ ಸಂಸ್ಥಾನ, ಶ್ರೀ ಸ್ವರ್ಣವಲ್ಲೀ, ಯಡತೊರೆ, ಚಿತ್ರಾಪುರ, ಅದಮಾರು, ಕಾಣಿಯೂರು, ಸುಬ್ರಹ್ಮಣ್ಯ, ಆನೆಗುಂದಿ ಸಂಸ್ಥಾನ, ಬಾಳಗಾರು ಮಠ, ಬಾಳೆಕುದ್ರು ಮಠ, ಕೇಮಾರು ಮಠ, ಹಳದೀಪುರ ಸಂಸ್ಥಾನ, ಒಡಿಯೂರು ಸಂಸ್ಥಾನ, ಶ್ರೀಶೈಲ ಮಹಾಪೀಠ, ಬೇಲಿಮಠ, ಆದಿಚುಂಚನಗಿರಿ ಮಠ, ರಾಮಕೃಷ್ಣಾಶ್ರಮ, ಚಿನ್ಮಯಮಿಷನ್, ಶೃಂಗೇರಿ ಪೀಠದ ಆಡಳಿತಾಧಿಕಾರಿಗಳಾದ ಡಾ| ಗೌರೀಶಂಕರ್, ಹೊರನಾಡಿನ ಧರ್ಮದರ್ಶಿಗಳಾದ ಶ್ರೀ ಡಾ| ಭೀಮೇಶ್ವರ ಜೋಷಿ, ಪುತ್ತೂರಿನ ದಿ| ಅಜ್ಜ, ನಿಟ್ಟೆ ವಿದ್ಯಾ ಸಂಸ್ಥೆಯ ಶ್ರೀ ವಿನಯ ಹೆಗ್ಡೆ, ಖ್ಯಾತ ಸಾಹಿತಿ ಡಾ| ಎಸ್. ಎಲ್. ಭೈರಪ್ಪ, ಶಿಕ್ಷಣ ತಜ್ಞರಾದ ದಿ| ಡಾ| ಭಾರತೀ ರಮಣಾಚಾರ್ಯ, ದಿ| ಪ್ರೊ ಜಿ. ಎಸ್. ಮುಡಂಬಡಿತ್ತಾಯ, ದಿ| ಪ್ರೊ ಎಸ್. ಆರ್. ರೋಹಿಡೇಕರ್, ನ್ಯಾಯಮೂರ್ತಿ ದಿ| ರಾಮಾಜೋಯಿಸ್, ದಿ| ನ. ಕೃಷ್ಣಪ್ಪ, ಶ್ರೀ ಎಲ್. ಕೆ. ಆಡ್ವಾಣಿ, ಮೈಸೂರಿನ ಯುವರಾಜ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಿ. ಆರ್. ಎಲ್. ಸಮೂಹ ಸಂಸ್ಥೆಯ ಡಾ| ವಿಜಯಸಂಕೇಶ್ವರ್, ಅಮೆರಿಕದ ವಿಶ್ವ ಪ್ರಸಿದ್ಧ ವಿದ್ವಾಂಸರಾದ ಡಾ| ಡೇವಿಡ್ ಫ್ರಾಲಿ, ಸಾಮಾಜಿಕ ಕ್ಷೇತ್ರಗಳ ಗಣ್ಯರಾದ ಡಾ| ಮೋಹನ್ ಭಾಗವತ್, ಶ್ರೀ ದತ್ತಾತ್ರೇಯ ಹೊಸಬಾಳೆ, ಶ್ರೀ ಸುರೇಶ್ ಸೋನಿ, ಮುಂತಾದ ದೇಶ ವಿದೇಶಗಳ ಅನೇಕ ಪ್ರತಿಷ್ಠಿತರು ಗುರುಕುಲವನ್ನು ಸಂದರ್ಶಿಸಿ ಮೆಚ್ಚುಗೆ ನೀಡಿ, ಶುಭ ಹಾರೈಸಿದ್ದಾರೆ.



